# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಪ್ರಕಟಣೆ :ಮೈನಪ್ರಾ/ಲಲಿತಾದ್ರಿನಗರ (ಉತ್ತರ) ಪ್ರಕಟಣೆ ಸಂಖ್ಯೆ–1/2017–18 ದಿನಾಂಕ 26.07.2017

## ಲಲಿತಾದ್ರಿ ನಗರ (ಉತ್ತರ) ಬಡಾವಣೆಯಲ್ಲಿ ನಿವೇಶನಗಳ ಹಂಚಿಕೆಗೆ ಸಾರ್ವಜನಿಕರಿಂದ ಅರ್ಜಿಗಳ ಆಹ್ವಾನ

## ಅಧಿಸೂಚನೆ

1. **ಹಂಚಿಕೆ ನಿವೇಶನಗಳ ವಿವರ**

| 1 | 2 | 3 | 4 | 5 | 6 | 7ಎ | 7ಬಿ |
|---|---|---|---|---|---|---|---|
| | | | | | | ಅರ್ಜಿಯೊಂದಿಗೆ ಪಾವತಿಸಬೇಕಾದ ಪ್ರಾರಂಭಿಕ ಠೇವಣಿ ಮೊಬಲಗು | |
| ಕ್ರ. ಸಂ | ಅಳತೆ ಮೀಟರ್ ಗಳಲ್ಲಿ | ನಿವೇಶನಗಳ ಸಂಖ್ಯೆ | ನಿವೇಶನದ ಮೌಲ್ಯ ರೂ.ಗಳಲ್ಲಿ | ದರ ಚ.ಮೀ ಒಂದಕ್ಕೆ ರೂ.ಗಳಲ್ಲಿ | ನೋಂದಣಿ ಶುಲ್ಕ ರೂ.ಗಳಲ್ಲಿ | ಅನುಸೂಚಿತ.ಜಾತಿ/ಅನುಸೂಚಿತ .ಪಂಗಡ, ಮಾಜಿ ಸೈನಿಕ ಮೃತ ಸೈನಿಕ ಕುಟುಂಬದ ಸದಸ್ಯರು ಮತ್ತು ಕೇಂದ್ರ ಸಶಸ್ತ್ರ ಸೈನಿಕ ವರ್ಗದವರಿಗೆ ನಿವೇಶನ ಮೌಲ್ಯದ ಶೇ.3%ರಷ್ಟು | ಇತರರಿಗೆ ನಿವೇಶನ ಮೌಲ್ಯದ ಶೇ.10%ರಷ್ಟು |
| 1 | 15x24 | 35 | 21,69,000-00 | 6024-00 | 2000.00 | 65,070-00 | 2,16,900-00 |
| 2 | 12x18 | 70 | 11,53,000-00 | 5340-00 | 500.00 | 34,590-00 | 1,15,300-00 |
| 3 | 9x12 | 300 | 4,34,000-00 | 4016-00 | 500.00 | 13,020-00 | 43,400-00 |
| 4 | 6x9 | 125 | 1,55,000-00 | 2875-00 | 100.00 | 4650-00 | 15,500-00 |
| ಒಟ್ಟು ನಿವೇಶನಗಳು | | 530 | | | | | |

## <u>ನಿಯಮ ಮತ್ತು ನಿಬಂಧನೆಗಳು:</u>

**ನಿವೇಶನಗಳ ಹಂಚಿಕೆಯು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮಗಳು 1991–ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.**

2. ಅರ್ಜಿದಾರರು 18 ವರ್ಷ ಮೇಲ್ಪಟ್ಟ ವಯಸ್ಸಿನವರಾಗಿರಬೇಕು.

3. ಅರ್ಜಿದಾರರು ಅರ್ಜಿ ಸಲ್ಲಿಸುವುದಕ್ಕೆ ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ನಿಕಟಪೂರ್ವದ 5 (ಐದು) ವರ್ಷಗಳಿಗೆ ಕಡಿಮೆ ಇಲ್ಲದಂತೆ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರಬೇಕು. ಪರಂತು ಕರ್ನಾಟಕದ ನಿವಾಸಿಗಳಾಗಿದ್ದು, ಉದ್ಯೋಗದ ಮೇಲೆ/ವಿದ್ಯಾಭ್ಯಾಸದ ನಿಮಿತ್ತ/ವ್ಯಾಪಾರದ ಮೇಲೆ/ತರಬೇತಿಗಾಗಿ ಹೊರ ರಾಜ್ಯದಲ್ಲಿರುವವರಿಗೆ/ವಿದೇಶದಲ್ಲಿರುವವರಿಗೆ ಇದು ಅನ್ವಯವಾಗುವುದಿಲ್ಲ.

4. **ಅರ್ಜಿದಾರರ ಅಥವಾ ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಯಾವುದೇ ಪ್ರಾಧಿಕಾರಗಳಿಂದ, ಕರ್ನಾಟಕ ಗೃಹ ಮಂಡಳಿ ಅಥವಾ ಯಾವುದೇ ಸರ್ಕಾರದ ಏಜೆನ್ಸಿ ಅಥವಾ ಗೃಹ ನಿರ್ಮಾಣ ಸಹಕಾರ ಸಂಘಗಳಿಂದ ಅಭಿವೃದ್ಧಿಪಡಿಸಿದ ಖಾಸಗಿ ಬಡಾವಣೆಗಳಿಂದ ಅಥವಾ ಇನ್ನಿತರೇ ಯಾವುದೇ ಮೂಲಗಳಿಂದಾಗಲೀ ಸ್ವಂತ ನಿವೇಶನ ಅಥವಾ ಮನೆ ಹೊಂದಿರಬಾರದು.**

5. ಈ ಹಿಂದೆ ಪ್ರಾಧಿಕಾರದಿಂದ ನಿವೇಶನ ಹಂಚಿಕೆಗಾಗಿ ಹೊರಡಿಸಿದ್ದ ಪ್ರಕಟಣೆಗನುಗುಣವಾಗಿ ಅರ್ಜಿ ಸಲ್ಲಿಸಿದ್ದ ಅರ್ಜಿದಾರರು ಮೃತರಾಗಿದ್ದಲ್ಲಿ, ಕಾನೂನು ಬದ್ಧ ವಾರಸುದಾರರು, ತಾವು ಸಲ್ಲಿಸುವ ಅರ್ಜಿಯೊಂದಿಗೆ ಮೂಲ ಅರ್ಜಿದಾರರ ದೃಢೀಕೃತ ಮರಣ ಸಮರ್ಥನ ಪತ್ರ, ಅವರ ಭಾವಚಿತ್ರವಿರುವ ಗುರುತಿನ ಚೀಟಿ ಮತ್ತು ತಾಲ್ಲೂಕು ತಹಸೀಲ್ದಾರ್ ರವರಿಂದ ಪಡೆದ ಕುಟುಂಬ ಜೀವಿತ ಸದಸ್ಯರ ದೃಢೀಕರಣ ಪತ್ರ.ವನ್ನು ಕಡ್ಡಾಯವಾಗಿ ಲಗತ್ತಿಸುವುದು.

6. ಪ್ರಕಟಿತ ನಿವೇಶನದ ಮೌಲ್ಯವು ಅಂದಾಜಿನದಾಗಿದ್ದು, ಒಂದು ವೇಳೆ ಹೆಚ್ಚುವರಿಯಾದಲ್ಲಿ ಯಶಸ್ವಿಯಾದ ಅರ್ಜಿದಾರರಿಗೆ ಮಾಹಿತಿ ಕಳುಹಿಸುವ ಸಮಯದಲ್ಲಿ ಪರಿಷ್ಕರಣೆ ಮಾಡುವುದಕ್ಕೆ ಒಳಪಟ್ಟಿರುತ್ತದೆ. ಹೆಚ್ಚುವರಿ ವ್ಯತ್ಯಾಸದ ಮೊಬಲಗನ್ನು ಪಾವತಿಸಲು ಬದ್ಧರಾಗಿರತಕ್ಕದ್ದು.

7. ಮಂಜೂರಾತಿ ಹಂತದಲ್ಲಿ ಪ್ರಕಟಿತ ನಿವೇಶನಗಳ ಸಂಖ್ಯೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡುವ ಹಕ್ಕನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

8. **ನಿವೇಶನ ಕೋರಿ ಅರ್ಜಿ ಸಲ್ಲಿಸುವವರು ಈ ಹಿಂದೆ ಪ್ರಯತ್ನಿಸಿದ್ದ ಅಳತೆಯ ನಿವೇಶನಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ಒಂದು ವೇಳೆ ಅಳತೆ ಬದಲಾವಣೆ ಮಾಡಿದ್ದಲ್ಲಿ ಅವರು ಈ ಹಿಂದೆ ಕಡಿಮೆ ಅಥವಾ ಹೆಚ್ಚಿನ ಅಳತೆಯ ನಿವೇಶನಕ್ಕಾಗಿ ಮಾಡಿದ ಪ್ರಯತ್ನಗಳ ಜ್ಯೇಷ್ಠತೆಯನ್ನು ಕಳೆದುಕೊಳ್ಳುತ್ತಾರೆ.** ಹಾಗೊಂದು ವೇಳೆ ಬೇರೆ ಅಳತೆಯ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅಪೇಕ್ಷಿಪಟ್ಟಲ್ಲಿ, ಅಂತಹವರು ಪ್ರತ್ಯೇಕವಾಗಿ ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಠೇವಣಿ ಮೊಬಲಗಿನೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.

9. ಮೇಲಿನ ಪ್ರಕಟಣೆಯನ್ವಯ ನಿವೇಶನ ಹಂಚಿಕೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿವೇಶನ ಹಂಚಿಕೆ ನಿಯಮಗಳು 1991 ಮತ್ತು ಸರ್ಕಾರವು ಆಗ್ಗಿಂದಾಗ್ಗೆ ಹೊರಡಿಸುವ ತಿದ್ದುಪಡಿ ನಿಯಮಗಳ ರೀತ್ಯ ಪ್ರಯತ್ನಗಳನ್ನಾಧರಿಸಿ ಜೇಷ್ಠತೆಯ ಮೇರೆಗೆ ನಿವೇಶನವನ್ನು ಹಂಚಿಕೆ ಮಾಡಲಾಗುವುದು ಹಾಗೂ ಸ್ವಂತ ನಿವೇಶನ/ಮನೆ ಹೊಂದಿಲ್ಲದ ಅರ್ಹ ಅರ್ಜಿದಾರರುಗಳಿಗೆ ಮಾತ್ರ ನಿವೇಶನ ಮಂಜೂರು ಮಾಡಲಾಗುವುದು.

## ನೋಂದಣಿ ಮತ್ತು ಠೇವಣಿ ಮೊಬಲಗು:

10. ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಮಾಜಿ ಸೈನಿಕ, ಮೃತ ಸೈನಿಕ ಕುಟುಂಬದ ಸದಸ್ಯರು, ಕೇಂದ್ರ ಸಶಸ್ತ್ರ ಸೈನಿಕ ವರ್ಗ ಮತ್ತು ವಿಕಲಚೇತನ ವರ್ಗದವರು ಅರ್ಜಿ ಶುಲ್ಕ ರೂ.50/–ಗಳನ್ನು ಹಾಗೂ ಇತರೇ ವರ್ಗದವರು ರೂ.100/–ಗಳನ್ನು ಸೂಚಿತ ಬ್ಯಾಂಕುಗಳಲ್ಲಿ ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿದೆ.

11. ಈಗಾಗಲೇ ನೋಂದಣಿ ಮಾಡಿಸಿರುವವರು ಪುನ: ನೋಂದಣಿ ಮಾಡಿಸಬೇಕಾದ ಅಗತ್ಯವಿಲ್ಲ. ಆದರೆ ಅವರ ನೋಂದಣಿ ಸಂಖ್ಯೆ ಮತ್ತು ನೋಂದಣಿಯಾದ ದಿನಾಂಕದ ಬಗ್ಗೆ ಮಾಹಿತಿಯನ್ನು ಒದಗಿಸಿ, ಅರ್ಜಿ ಪಡೆಯುವುದು. ಅರ್ಜಿ ಪಡೆಯುವ ಸಂದರ್ಭದಲ್ಲಿ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಹಾಜರುಪಡಿಸುವುದು.

12. ಇದೇ ಪ್ರಥಮ ಬಾರಿಗೆ ಅರ್ಜಿ ಸಲ್ಲಿಸಬಯಸುವವರು ನೋಂದಣಿ ನಮೂನೆಯನ್ನು ಪಡೆಯವುದು. ಅರ್ಜಿದಾರರು ಅವರು ಇಚ್ಚಿಸುವ ಅಳತೆಗನುಗುಣವಾಗಿ ಮೇಲಿನ ಕಲಂ (1)ರಲ್ಲಿ ನಮೂದಿಸಿರುವಂತೆ ನೋಂದಣಿ ಶುಲ್ಕವನ್ನು ಪಾವತಿಸಿ ನೋಂದಣಿ ಮಾಡಿಸಬೇಕಾಗಿರುತ್ತದೆ. ನೋಂದಣಿ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ. ಅದನ್ನು ಸರಿ ಹೊಂದಿಸಲಾಗುವುದಿಲ್ಲ ಹಾಗೂ ನೋಂದಣಿಯನ್ನು ಹಿಂಪಡೆಯಲು ಅವಕಾಶವಿರುವುದಿಲ್ಲ.

13. ನಿವೇಶನದ ಅಳತೆಗೆ ಅನುಗುಣವಾಗಿ ಪ್ರಾರಂಭಿಕ ಠೇವಣಿ ಮೊಬಲಗನ್ನು ಕಲಂ (7ಎ) ಮತ್ತು (7ಬಿ) ರಲ್ಲಿ ನಮೂದಿಸಿರುವಂತೆ **ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು** ಇವರ ಹೆಸರಿನಲ್ಲಿ ಡಿ.ಡಿ./ಪೇ ಆರ್ಡರ್ ಪಡೆಯುವುದು.

14. ಯಾವ ಬ್ಯಾಂಕ್ ಶಾಖೆಯಿಂದ ನೀವು ಅರ್ಜಿ ಪಡೆದಿರುವಿರೋ ಅದೇ ಬ್ಯಾಂಕಿಗೆ ಭರ್ತಿ ಮಾಡಿದ ಅರ್ಜಿಯನ್ನು ಪ್ರಾರಂಭಿಕ ಠೇವಣಿಯ ಡಿ.ಡಿ/ಪೇ ಆರ್ಡರ್‌ನ್ನು ಲಗತ್ತಿಸಿ, ಅಂತಿಮ ದಿನಾಂಕದ ನಿಗಧಿತ ಸಮಯದೊಳಗೆ ಅಥವಾ ಮುಂಚಿತವಾಗಿ ಬ್ಯಾಂಕ್ ಸಮಯದ ಮುಕ್ತಾಯದ ಸಮಯಕ್ಕಿಂತ ಮುನ್ನ ಸಲ್ಲಿಸಿ ಸ್ವೀಕೃತಿ ಪಡೆಯುವುದು ಮತ್ತು ಈ ಸ್ವೀಕೃತಿಯನ್ನು ಕಾಪಾಡಿಕೊಳ್ಳತಕ್ಕದ್ದು.

**15.** ಆಯ್ಕೆಯಾದ ಮಂಜೂರಾತಿದಾರರ ಪ್ರಾರಂಭಿಕ ಠೇವಣಿಯನ್ನು ಅವರಿಗೆ ಹಂಚಿಕೆಯಾದ ನಿವೇಶನದ ಮೊಬಲಗಿಗೆ ಸರಿಹೊಂದಿಸಿಕೊಳ್ಳಲಾಗುವುದು. **ಆಯ್ಕೆಯಾಗದ ಅರ್ಜಿದಾರರಿಗೆ ಅವರು ಪಾವತಿಸಿರುವ ಪ್ರಾರಂಭಿಕ ಠೇವಣಿ ಮೊಬಲಗನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು.**

16. ಅಂಚೆ ಮೂಲಕ ಅರ್ಜಿ ಪಡೆಯಲು ಬಯಸುವವರು ನಿಗಧಿಯ ಅರ್ಜಿ ಶುಲ್ಕ ಮತ್ತು ಸ್ಪೀಡ್ ಪೋಸ್ಟ್ ಅಂಚೆ ಶುಲ್ಕ ರೂ.50/– ಗಳನ್ನು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರ ಹೆಸರಿಗೆ ಪಡೆದ ಪ್ರತ್ಯೇಕ ಡಿ.ಡಿ/ಪೇ ಆರ್ಡರ್ ಅನ್ನು, ಮತ್ತು ಸ್ವ ವಿಳಾಸವಿರುವ ಲಕೋಟೆಯೊಂದಿಗೆ, ವ್ಯವಸ್ಥಾಪಕರು, ವಿಜಯಾ ಬ್ಯಾಂಕ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಶಾಖೆ, ಜೆ.ಎಲ್.ಬಿ ರಸ್ತೆ, ಮೈಸೂರು –570005. ರವರಿಗೆ ಕಳುಹಿಸಿ ಅವರಿಂದ ನೇರವಾಗಿ ಅರ್ಜಿ ಫಾರಂಗಳನ್ನು ಪಡೆದುಕೊಳ್ಳಬಹುದು

17. ಅರ್ಜಿ ಫಾರಂಗಳನ್ನು ಅಂಚೆ ಮೂಲಕ ಪಡೆದವರು, ಭರ್ತಿ ಮಾಡಿದ ಅರ್ಜಿಗಳನ್ನು ನಿಗಧಿತ ಅಳತೆಯ ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಠೇವಣಿ ಮೊಬಲಗಿನ ಡಿ.ಡಿ/ಪೇ ಆರ್ಡರ್ (ಆಯಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರ ಹೆಸರಿನಲ್ಲಿ ಪಡೆದ) ಅರ್ಜಿ ಸ್ವೀಕರಿಸುವುದಕ್ಕೆ ನಿಗಧಿಪಡಿಸಿರುವ ಕಡೇ ದಿನಾಂಕದ ನಿಗಧಿತ ಸಮಯದೊಳಗೆ, ವ್ಯವಸ್ಥಾಪಕರು, ವಿಜಯಾ ಬ್ಯಾಂಕ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA) ಶಾಖೆ, ಮೈಸೂರು 570005, ಇವರಿಗೆ ನೋಂದಣಿ ಅಂಚೆ ಸ್ವೀಕೃತಿ ಮೂಲಕ ಕಳುಹಿಸತಕ್ಕದ್ದು. ನಂತರ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

## ನಿವೇಶನ ಹಂಚಿಕೆ ಮೀಸಲಾತಿ:

18. ನಿವೇಶನಗಳನ್ನು ಹಂಚಿಕೆ ಮಾಡುವಾಗ ನಿಯಮ 11ರ ಪ್ರಕಾರ ಈ ಕೆಳಗೆ ತಿಳಿಸಿರುವ ರೀತಿಯಲ್ಲಿ ವಿವಿಧ ಪ್ರವರ್ಗಗಳಿಗೆ ಮೀಸಲಾತಿಯನ್ನು ನಿರ್ಧರಿಸಲಾಗುವುದು.

| | | | |
|---|---|---|---|
| ಎ | ಹಿಂದುಳಿದ ಪಂಗಡಗಳು | - | 02% |
| ಬಿ | ಅನುಸೂಚಿತ ಬುಡಕಟ್ಟುಗಳು | - | 6.55% |
| ಸಿ | ಅನುಸೂಚಿತ ಜಾತಿಗಳು | - | 16.20% |
| ಡಿ | ಮಾಜಿ ಸೈನಿಕರು ಮತ್ತು ಮೃತ ಸೈನಿಕರ ಕುಟುಂಬದ ಸದಸ್ಯರು ಮತ್ತು ಕೇಂದ್ರ ಸಶಸ್ತ್ರ ಪಡೆಯ ಸದಸ್ಯರು | - | 7.75% |
| ಇ | ರಾಜ್ಯ ಸರ್ಕಾರದ ನಿಗಮ ಸಾರ್ವಜನಿಕ ವಲಯ ಉದ್ದಿಮೆಗಳು ನಿಗಮ ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು | - | 7.50% |
| ಎಫ್ | ಕೇಂದ್ರ ಸರ್ಕಾರದ ನಿಗಮ ಸಾರ್ವಜನಿಕ ವಲಯ ಉದ್ದಿಮೆಗಳು ನಿಗಮ ಮತ್ತು ಶಾಸನ ಪ್ರದತ್ತ ಪ್ರಾಧಿಕಾರಗಳ ನೌಕರರು | - | 05% |
| ಜಿ | ಸಾರ್ವಜನಿಕರು | - | 50% |
| ಹೆಚ್ | ಕಲೆ, ವಿಜ್ಞಾನ ಕ್ರೀಡೆ ಅಥವಾ ಇನ್ನಾವುದೇ ಕ್ರೀಡೆಗಳಲ್ಲಿ ಶ್ಲಾಘನೀಯ ಸಾಧನೆ ಸಾಧಿಸಿರುವ ವ್ಯಕ್ತಿಗಳು | - | 03% |
| ಐ | ವಿಕಲಚೇತನರು | - | 02% |
| | **ಒಟ್ಟು** | - | **100%** |

**(ಹಿಂದುಳಿದ ಪಂಗಡಗಳು ಎಂದರೆ, ಆಗ್ಗಿಂದಾಗ್ಗೆ ತಿದ್ದುಪಡಿಯಾದಂಥ ಸರ್ಕಾರಿ ಆದೇಶ ಸಂಖ್ಯೆ ಎಸ್.ಡಬ್ಲ್ಯೂಡಿ/225/ಬಿಸಿಎ/2000 ದಿನಾಂಕ 30-3-2002ರಲ್ಲಿ ಸರ್ಕಾರವು ಅಧಿಸೂಚಿಸಿದಂಥ ಇತರೇ ಹಿಂದುಳಿದ ವರ್ಗಗಳು).**

19. ಸಾರ್ವಜನಿಕ ಪ್ರವರ್ಗಕ್ಕೆ ಸೇರಿದ ಅರ್ಜಿದಾರರರನ್ನು ಹೊರತುಪಡಿಸಿ ಇತರೇ ಪ್ರವರ್ಗಕ್ಕೆ ಸೇರಿದ ಅರ್ಜಿದಾರರು ಇಚ್ಚೆಪಟ್ಟಲ್ಲಿ ಸಾರ್ವಜನಿಕ ಪ್ರವರ್ಗದಡಿಯಲ್ಲಿ ಅರ್ಜಿ ಸಲ್ಲಿಸಬಹುದು.

20. "ಹೆಚ್" ಪ್ರವರ್ಗದಲ್ಲಿ ಅರ್ಜಿ ಸಲ್ಲಿಸಬಯಸುವವರು, ವಿವಿಧ ಕ್ಷೇತ್ರಗಳಲ್ಲಿ ಶ್ಲಾಘನೀಯ ಸೇವೆ/ಸಾಧನೆ ಮಾಡಿರುವ ಸಂಬಂಧ ದಾಖಲಾತಿಗಳ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸುವುದು. ದಾಖಲಾತಿಗಳಿಲ್ಲದೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದೆ.

## ವಿಶೇಷ ಸೂಚನೆ:

**ರಾಜ್ಯ/ಕೇಂದ್ರ ಸರ್ಕಾರಿ ನೌಕರರ ಪ್ರವರ್ಗದ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸಬಯಸುವವರು ಲಲಿತಾದ್ರಿನಗರ ಬಡಾವಣೆಗೆ ಅರ್ಜಿ ಸಲ್ಲಿಸುವ ವೇಳೆ ನಿವೃತ್ತರಾಗಿದ್ದಲ್ಲಿ ಸದರಿ ಅರ್ಜಿದಾರರನ್ನು ರಾಜ್ಯ/ಕೇಂದ್ರ ಸರ್ಕಾರಿ ನೌಕರರ ಪ್ರವರ್ಗದ ಮೀಸಲಾತಿಯಡಿಯಲ್ಲಿ ಪರಿಗಣಿಸಲಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ನಿವೃತ್ತ ರಾಜ್ಯ/ಕೇಂದ್ರ ಸರ್ಕಾರಿ ನೌಕರರು ಸಾರ್ವಜನಿಕ ಪ್ರವರ್ಗದಡಿಯಲ್ಲಿ ಅರ್ಜಿ ಸಲ್ಲಿಸುವುದು. ಇಂತಹ ನಿವೃತ್ತ ನೌಕರರ ಈ ಹಿಂದಿನ ಪ್ರಯತ್ನಗಳನ್ನು ಸಾರ್ವಜನಿಕ ಪ್ರವರ್ಗದಡಿಯಲ್ಲಿ ಪರಿಗಣಿಸಲಾಗುವುದು.**

## ಸೂಚನೆ:

1. ಈ ಹಿಂದೆ ಪ್ರಾಧಿಕಾರದಿಂದ ನಿವೇಶನ ಹಂಚಿಕೆಗಾಗಿ ಹೊರಡಿಸಿದ್ದ ಪ್ರಕಟಣೆಗನುಗುಣವಾಗಿ ಪಾವತಿಸಿದ್ದ "ಪ್ರಾರಂಭಿಕ ಠೇವಣಿ" ಮೊಬಲಗನ್ನು ಈಗಾಗಲೇ ಚೆಕ್ ಮೂಲಕ ಹಿಂದಿರುಗಿಸಿದ್ದು, ಅದು ತಲುಪದಿದ್ದಲ್ಲಿ ಪ್ರಾಧಿಕಾರದ ಲೆಕ್ಕ ಶಾಖೆಯನ್ನು ಸಂಪರ್ಕಿಸಿ ಪ್ರಾರಂಭಿಕ ಠೇವಣಿ ಪಾವತಿಸಿದ್ದ ಮೂಲ ರಸೀದಿ, ಬ್ಯಾಂಕ್ ಪಾಸ್ ಪುಸ್ತಕದ ಮುಖಪುಟ ಮತ್ತು ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಹಾಜರುಪಡಿಸಿ ಪ್ರಾರಂಭಿಕ ಠೇವಣಿ ಮೊಬಲಗಿನ ಚೆಕ್ಕನ್ನು ಪಡೆಯಬಹುದಾಗಿದೆ. ಅದನ್ನು ವಾಪಸ್ಸು ಪಡೆಯದಿದ್ದರೂ ಸಹ ಅದನ್ನು ಈಗಿನ ಪ್ರಕಟಣೆಯ ಪ್ರಾರಂಭಿಕ ಠೇವಣಿ ಮೊಬಲಗಿಗೆ ಮರುಹೊಂದಾಣಿಕೆ ಮಾಡಲಾಗುವುದಿಲ್ಲ. ಹಾಗಾಗಿ ಅಂತಹ ಅರ್ಜಿದಾರರು ಹೊಸದಾಗಿಯೇ ಪ್ರಾರಂಭಿಕ ಠೇವಣಿ ಪಾವತಿಸಬೇಕಾಗಿರುತ್ತದೆ. ಆದರೆ ಅವರ ಜೇಷ್ಠತೆಗೆ ಯಾವ ಬಾಧಕವೂ ಇರುವುದಿಲ್ಲ.

2. ಅರ್ಜಿಗಳನ್ನು ಗಣಕೀಕರಣಗೊಳಿಸಲಾಗುವುದರಿಂದ ಅರ್ಜಿದಾರರು ಅರ್ಜಿಯಲ್ಲಿ ನೋಂದಣಿ ಸಂಖ್ಯೆ, ಹೆಸರು, ವಿಳಾಸ, ಜನ್ಮ ದಿನಾಂಕ, ವರ್ಗ, ಯೂನಿಕ್ ಸಂಖ್ಯೆ (ಈಗಾಗಲೇ ನೊಂದಣಿ ಮಾಡಿರುವವರು ಯೂನಿಕ್ ಸಂಖ್ಯೆ ಪಡೆದಿದ್ದಲ್ಲಿ ಮಾತ್ರ) ಇವುಗಳನ್ನು ಕಡ್ಡಾಯವಾಗಿ ಮತ್ತು ಸ್ಪಷ್ಟವಾಗಿ ನೀಡಿರುವ ಚೌಕಟ್ಟಿನೊಳಗೆ ಭರ್ತಿಮಾಡತಕ್ಕದ್ದು ಹಾಗೂ ಅರ್ಜಿದಾರರು ಅವರು ಪಡೆದ ಡಿ.ಡಿ/ಪೇ ಆರ್ಡರ್ ಹಿಂದೆ ಅವರ ಹೆಸರು, ನೋಂದಣಿ ಸಂಖ್ಯೆ ಮತ್ತು ಅರ್ಜಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು. ಅರ್ಜಿದಾರರು ಅರ್ಜಿಯಲ್ಲಿನ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡುವುದು ಮತ್ತು ಸಹಿ ಹಾಕುವುದು, **ಅಪೂರ್ಣವಾದ ಮತ್ತು ಸಹಿ ಹಾಕದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

3. **ಅರ್ಜಿದಾರರು ಅರ್ಜಿಯಲ್ಲಿ ಅವರ ಸ್ಥಿರ ದೂರವಾಣಿ ಸಂಖ್ಯೆ/ಮೊಬೈಲ್ ಸಂಖ್ಯೆ, ಅವರು ಹೊಂದಿರುವ ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ತಮ್ಮ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.**

## ಅರ್ಜಿದಾರರು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು:

- ಅರ್ಜಿದಾರರು ಆಧಾರ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು.
- ಅರ್ಜಿದಾರರು, ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಜನನ ಪ್ರಮಾಣ ಪತ್ರ,. ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಶಾಲಾ ವರ್ಗಾವಣೆ ಪತ್ರ/ ಶಾಲಾ ನೋಂದಣಿ ದಾಖಲಾತಿ ಅಥವಾ ವಯಸ್ಸಿನ ಪುರಾವೆಯ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ಯಾವುದೇ ದಾಖಲಾತಿಗಳು.
- ಅರ್ಜಿದಾರರ ವಾಸವಾಗಿರುವ ವಿಳಾಸದ ಬಗ್ಗೆ ವಾಸದ ದೃಢೀಕರಣ ಪತ್ರದ ಪ್ರತಿ. (ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ವಾಹನ ಪರವಾನಗಿ ಪತ್ರ, ಆಧಾರ್ ಕಾರ್ಡ್ ಸಂಖ್ಯೆ, ಪಾಸ್‌ಪೋರ್ಟ್, ಬ್ಯಾಂಕ್ ಪಾಸ್‌ಬುಕ್, ಅನಿಲ ಸಂಪರ್ಕ ಪುಸ್ತಕ).
- ಅರ್ಜಿದಾರರು ತಾವು ಹೊಂದಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್‌ನ ಮುಖಪುಟದ ದೃಢೀಕೃತ ಜೆರಾಕ್ಸ್ ಪ್ರತಿ.

## ಅಲ್ಲದೇ ಜೊತೆಗೆ ಆಯಾ ಪ್ರವರ್ಗದವರು ಸಲ್ಲಿಸುವ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

- ಅನುಸೂಚಿತ ಜಾತಿ/ಅನುಸೂಚಿತ ಪಂಗಡದವರಾಗಿದ್ದಲ್ಲಿ ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರ್‌ರವರಿಂದ ಇತ್ತೀಚೆಗೆ ಪಡೆದ ಜಾತಿ ದೃಢೀಕರಣ ಪತ್ರ.
- ಮಾಜಿ ಸೈನಿಕರು, ಮೃತ ಸೈನಿಕ ಕುಟುಂಬ ಸದಸ್ಯರಾಗಿದ್ದಲ್ಲಿ ಸೈನಿಕ ಪುನರ್‌ವಸತಿ ಇಲಾಖೆಯಿಂದ ಪಡೆದ ಪ್ರಮಾಣ ಪತ್ರ.
- ಕೇಂದ್ರ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವವರು ಸೇವಾ ದೃಢೀಕರಣ ಪತ್ರ.
- ರಾಜ್ಯ/ಕೇಂದ್ರ ಸರ್ಕಾರ ಅಥವಾ ನಿಗಮ ಮಂಡಳಿ, ನಗರಪಾಲಿಕೆಗಳು ಇನ್ನಿತರೆ ಸರ್ಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ಇಲಾಖೆಯಿಂದ ನೀಡಿರುವ ಭಾವಚಿತ್ರವಿರುವ ಗುರುತಿನ ಚೀಟಿ.
- ವಿಕಲಚೇತನ ಪ್ರವರ್ಗದಡಿ ಮೀಸಲಾತಿ ಕೋರಿರುವವರು ಜಿಲ್ಲಾ ಸರ್ಜನ್/ಜಿಲ್ಲಾ ಸರ್ಜನ್ ಹುದ್ದೆಗೆ ಕಡಿಮೆಯಿಲ್ಲದ ವೈದ್ಯಾಧಿಕಾರಿಯು ನೀಡಿದ ದೃಢಿಕರಣ ಪತ್ರ ಸಲ್ಲಿಸತಕ್ಕದ್ದು.
- ಹೆಚ್ ಪ್ರವರ್ಗದಡಿಯಲ್ಲಿ ಅರ್ಜಿ ಸಲ್ಲಿಸುವವರು ತಮ್ಮ ಕ್ಷೇತ್ರದಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿರುವ ಬಗ್ಗೆ ಪಡೆದಿರುವ ದೃಢೀಕೃತ ಪ್ರಮಾಣ/ಪ್ರಶಸ್ತಿ ಪತ್ರ.
- ಪ್ರಾಧಿಕಾರವು 1989, 1991, 1992, 1994 (ಮಾರ್ಚ್ ಮತ್ತು ಆಗಸ್ಟ್), 1999, 2004, 2005 ಮತ್ತು 2011ರಲ್ಲಿ ನಿವೇಶನ ಹಂಚಿಕೆಗಾಗಿ ಹೊರಡಿಸಿದ್ದ ಪ್ರಕಟಣೆಗಳನ್ವಯ ಅರ್ಜಿ ಸಲ್ಲಿಸಿದ್ದಲ್ಲಿ, ಆ ಬಗ್ಗೆ ಮುಂಗಡ ಠೇವಣಿ ಪಾವತಿಸಿದ ಮೂಲ ರಶೀತಿಯ ಜೆರಾಕ್ಸ್ ಪ್ರತಿ.

## ಅರ್ಜಿಗಳನ್ನು ಈ ಕೆಳಕಂಡ ಶಾಖೆಗಳಲ್ಲಿ ನಿಗಧಿತ ಅರ್ಜಿ ಶುಲ್ಕ ಪಾವತಿಸಿ ಸ್ವೀಕೃತಿ ಪಡೆಯಬಹುದಾಗಿದೆ.

1. ವಿಜಯ ಬ್ಯಾಂಕ್, ನಂ.756, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, ಮೈಸೂರು–570023. ದೂರವಾಣಿ– 2547355
2. ವಿಜಯ ಬ್ಯಾಂಕ್, ಹೋಟೆಲ್ ಶ್ರೀರಾಮ್ ಬಿಲ್ಡಿಂಗ್, ಸಯ್ಯಾಜಿರಾವ್ ರಸ್ತೆ, ಮೈಸೂರು 570021– ದೂರವಾಣಿ– 2428487
3. ವಿಜಯ ಬ್ಯಾಂಕ್, ಪಿ.ಬಿ.ನಂ.31, ದೇವರಾಜ ಅರಸ್ ರಸ್ತೆ, ಸಂತೆಪೇಟೆ, ಮೈಸೂರು–570001. ದೂರವಾಣಿ 2420647
4. ವಿಜಯ ಬ್ಯಾಂಕ್, 415, ಕಾಂಟೂರ್ ರಸ್ತೆ, ಗೋಕುಲಂ 3ನೇ ಹಂತ, ಮೈಸೂರು 570002, ದೂರವಾಣಿ– 2511458
5. ವಿಜಯ ಬ್ಯಾಂಕ್, ಮದ್ವೇಶ ಕಾಂಪ್ಲೆಕ್ಸ್, ನಜರಬಾದ್ ಮೇನ್ ರೋಡ್, 570010. ದೂರವಾಣಿ–2442642
6. ವಿಜಯ ಬ್ಯಾಂಕ್, ಸಾಹುಕಾರ್ ಚೆನ್ನಯ್ಯ ರಸ್ತೆ, ಬೋಗಾಧಿ, 3ನೇ ಹಂತ, ಮೈಸೂರು, 570026. ದೂರವಾಣಿ–2342526
7. ವಿಜಯ ಬ್ಯಾಂಕ್, ನಂ.6, ಬನ್ನಿಮಂಟಪ ಮುಖ್ಯ ರಸ್ತೆ, ಮೈಸೂರು 57001. ದೂರವಾಣಿ–2493886.
8. ವಿಜಯ ಬ್ಯಾಂಕ್, ನಂ.55–ಎ, 1ನೇ ಹಂತ ಇಂಡಸ್ಟ್ರಿಯಲ್ ಸಬರ್ಬ್, ಮೈಸೂರು =570008. ದೂರವಾಣಿ–2480571.

**ಗಮನಿಸಿ:**

- **ಅರ್ಜಿಗಳನ್ನು ದಿನಾಂಕ 01.08.2017 ರಿಂದ 16.08.2017 ರವರೆಗೆ (ಸಾರ್ವತ್ರಿಕ ರಜೆ ದಿನಗಳನ್ನು ಹೊರತುಪಡಿಸಿ) ಮೇಲೆ ತಿಳಿಸಿದ ಬ್ಯಾಂಕ್ ಶಾಖೆಗಳಲ್ಲಿ ವಿತರಿಸಲಾಗುವುದು.**
- **ಭರ್ತಿ ಮಾಡಿದ ಅರ್ಜಿಗಳನ್ನು ನಿಗಧಿತ ಪ್ರಾರಂಭಿಕ ಠೇವಣಿಯ ಡಿಡಿ/ಪೇ ಆರ್ಡರ್ ನೊಂದಿಗೆ ಅರ್ಜಿಯನ್ನು ಪಡೆದ ಬ್ಯಾಂಕಿಗೆ ಸಲ್ಲಿಸಲು ಕೊನೆಯ ದಿನಾಂಕ 26.08.2017ರ ಸಂಜೆ 4.00 ಗಂಟೆಯೊಳಗೆ.**

**ಸಹಿ/–**
**ಆಯುಕ್ತರು**
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು